KATK010047762023

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.106/2023</u>**

ಪ್ರಾ.ಸಾ. 12

ದೋ.ಸಾ. 17

ದಿ.10.07.2026

| | |
|---|---|
| ಹೆಸರು | : ಮುತ್ತುರಾಜು ಜೆ. |
| ತಂದೆಯ ಹೆಸರು | : ಜಯಣ್ಣ |
| ವಯಸ್ಸು | : 40 ವರ್ಷ |
| ಉದ್ಯೋಗ | : ಪಿಎಸ್‌ಐ, ಗುಡಿಬಂಡೆ ಪೋಲೀಸ್ ಠಾಣೆ |
| ವಾಸಸ್ಥಳ | : ಗುಡಿಬಂಡೆ |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>**

1. ದಿ.28.06.2022 ರಿಂದ 28.07.2023 ರವರೆಗೆ ನಾನು ಗುಬ್ಬಿ ಪೋಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.18.07.2022 ರಂದು ಈ ಪ್ರಕರಣದ ಕಡತವನ್ನು ಠಾಣಾ ಹೆಚ್ ಸಿ 294 ಜಯರಾಮಯ್ಯನವರಿಂದ ಪಡೆದು, ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಆರೋಪಿಯ ಪತ್ತೆ ಬಗ್ಗೆ ಠಾಣಾ ಪಿಸಿ 507 ರಂಗನಾಥ ಮತ್ತು ಪಿಸಿ 545 ನವೀನ್ ಕುಮಾರ್ ರವರನ್ನು ನೇಮಕ ಮಾಡಿದ್ದು, ಸದರಿಯವರು ಆರೋಪಿಯನ್ನು ತಂದು ಹಾಜರುಪಡಿಸಿ, ವರದಿ ನೀಡಿರುತ್ತಾರೆ. ಆ ವರದಿಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಶಾನೆ ಪಿ13 ಮತ್ತು 14 ಎಂದು ಗುರುತಿಸಲಾಗಿದೆ. ಅನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ.
3. ನಂತರ ನಾನು ಠಾಣಾ ಸಿ ಆರ್ ನಂ.157/22 ರಲ್ಲಿ ತನಿಖೆಯಲ್ಲಿ ಇದ್ದುದರಿಂದ ಠಾಣಾ ಎಎಸ್‌ಐ ಶಿವಣ್ಣನವರನ್ನು ಮೃತಳ ಶವ ತನಿಖೆಯ ಬಗ್ಗೆ ನೇಮಕ ಮಾಡಿದೆನು. ದಿ.19.07.2022 ರಂದು ಆರೋಪಿ ಕುಮಾರ್ ರವರು ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 9.00-9.30 ಗಂಟೆಯವರೆಗೆ ಪಂಚ

ಸಾಕ್ಷಿದಾರರಾದ ಶ್ರೀನಿವಾಸ್ ಮತ್ತು ಶಿವಕುಮಾರ್ ರವರ ಸಮಕ್ಷಮ ಜರುಗಿಸಿರುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಶಾನೆ 12 ಎಂದು ಗುರುತಿಸಲಾಗಿದೆ. ನಿಶಾನೆ ಪಿ12 ರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ12(ಬಿ) ಎಂದು ಗುರುತಿಸಲಾಯಿತು.

4. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮ ಅನುಸರಿಸಿ, ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ರಿಮ್ಯಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.
5. ದಿ.22.07.2022 ರಂದು ಫಿರ್ಯಾದಿ ಜಯಮ್ಮನವರಿಗೆ ಮೃತಳ ಕೈಬರಹದ ದಾಖಲೆಗಳನ್ನು ಹಾಜರುಪಡಿಸಲು ನೋಟೀಸ್ ನೀಡಿರುತ್ತೇನೆ.
6. ದಿ.25.07.2022 ರಂದು ಮೃತಳ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದಿರುತ್ತೇನೆ. ಅದನ್ನು ಈಗಾಗಲೇ ನಿಶಾನೆ ಪಿ15 ಎಂದು ಗುರುತಿಸಲಾಗಿದೆ. ದಿ.26.07.2022 ರಂದು ಫಿರ್ಯಾದಿ ಜಯಮ್ಮನವರು ಮೃತಳ ಕೈಬರಹವನ್ನು ತಂದು ಹಾಜರುಪಡಿಸಿದ್ದು, ಪಂಚ ಸಾಕ್ಷಿದಾರರಾದ ಮಂಜುನಾಥ ಮತ್ತು ರಂಗಪ್ಪನವರ ಸಮಕ್ಷಮ ಬೆಳಿಗ್ಗೆ 11.00-11.45 ಗಂಟೆಯವರೆಗೆ ಅಮಾನತ್ತು ಪಂಚನಾಮೆ ಕೈಗೊಂಡಿರುತ್ತೇನೆ. ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಶಾನೆ 5 ಎಂದು ಗುರುತಿಸಲಾಗಿದೆ. ನಿಶಾನೆ ಪಿ5 ರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ5(ಬಿ) ಎಂದು ಗುರುತಿಸಲಾಯಿತು. ನೋಟ್ ಬುಕ್ ಅನ್ನು ನಿಶಾನೆ ಪಿ6 ಎಂದು ಗುರುತಿಸಲಾಗಿದೆ.
7. ದಿ.07.08.2022 ರಂದು ಸದರಿ ಅಮಾನತ್ತುಪಡಿಸಿಕೊಂಡ ಮೃತಳ ಕೈಬರಹ ಇರುವ ನೋಟ್ ಪುಸ್ತಕ ಮತ್ತು ಪ್ರಶ್ನಿತ ಮೃತಳ ಕೈಬರಹ ಇರುವ ದಾಖಲೆಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ.
8. ದಿ.11.08.2022 ರಂದು ಎಫ್ ಎಸ್ ಎಲ್ ನಿಂದ ಸ್ವೀಕೃತಿ ಪತ್ರವನ್ನು ಪಡೆದಿರುತ್ತೇನೆ. ಅದನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ19 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ19(ಎ) ಎಂದು ಗುರುತಿಸಲಾಯಿತು. ಅದೇ ದಿನ ಪ್ರತ್ಯಕ್ಷ ಸಾಕ್ಷಿದಾರರಾದ ದಿವ್ಯ ಮತ್ತು ಕಾವ್ಯ ರವರ ಹೇಳಿಕೆಗಳನ್ನು ಮತ್ತು ಇತರೆ ಸಾಕ್ಷಿದಾರರಾದ ಸುವರ್ಣಮ್ಮ, ಮಂಜುಳಾ ಮತ್ತು ಚಂದ್ರಶೇಖರ್ ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ದಿವ್ಯ, ಕಾವ್ಯ, ಸುವರ್ಣಮ್ಮ ಮತ್ತು

ಮಂಜುಳಾ ರವರು ನಿಶಾನೆ ಪಿ8 ರಿಂದ 11 ರಂತೆ ನನ್ನ ಮುಂದೆ ಹೇಳಿಕೆಗಳನ್ನು ಕೊಟ್ಟಿರುತ್ತಾರೆ.

9. ದಿ.04.09.2022 ರಂದು ಎಫ್ ಎಸ್ ಎಲ್ ವರದಿಯನ್ನು ಬಾಕಿ ಇಟ್ಟು ತನಿಖೆ ಪೂರ್ಣಗೊಳಿಸಿ, ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಆರೋಪಿಯ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

10. ದಿ.31.03.2023 ರಂದು ಎಫ್ ಎಸ್ ಎಲ್ ವರದಿಯನ್ನು ಪಡೆದು ಕಡತದಲ್ಲಿ ಅಳವಡಿಸಿಕೊಂಡು, ದಿ.01.04.2023 ರಂದು ಎಫ್ ಎಸ್ ಎಲ್ ವರದಿಯನ್ನು ಮತ್ತು ಭಾವನಾ ದೇಸಾಯಿ, ತಜ್ಞರನ್ನು ಸಾಕ್ಷಿದಾರರನ್ನಾಗಿ ಅಳವಡಿಸಲು ನ್ಯಾಯಾಲಯಕ್ಕೆ ಪತ್ರವನ್ನು ಕಳುಹಿಸಿರುತ್ತೇನೆ. ಎಫ್ ಎಸ್ ಎಲ್ ವರದಿಯನ್ನು ಈಗಾಗಲೇ ನಿಶಾನೆ ಪಿ17 ಎಂದು ಗುರುತಿಸಲಾಗಿದೆ. ಮಾದರಿ ಮೊಹರನ್ನು ನಿಶಾನೆ ಪಿ18 ಎಂದು ಗುರುತಿಸಲಾಗಿದೆ. ಆರೋಪಿ ಕುಮಾರ್ ಈಗ ನ್ಯಾಯಾಲಯದ ಮುಂದೆ ಇದ್ದಾನೆ ನೋಡಿ ಗುರುತಿಸಿದ್ದೇನೆ.

**ಪಾಟೀ ಸವಾಲು ಶ್ರೀ.ಹೆಚ್.ಎನ್.ಗುರುನಂಜೇಗೌಡ, ವಕೀಲರಿಂದ ಆರೋಪಿತನ ಪರವಾಗಿ:**

11. ಆರೋಪಿಯ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ, ಅವರು ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚ ಸಾಕ್ಷಿದಾರರಿಗೆ ನೋಟೀಸ್ ಜಾರಿ ಮಾಡಿದ್ದೇನೆ. ಆ ನೋಟೀಸನ್ನು ದೋಷಾರೋಪಣಾ ಪತ್ರದ ಜೊತೆಗೆ ಹಾಜರು ಮಾಡಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆ ಮಾಡಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಶ್ನಿತ ದಾಖಲಾತಿಯನ್ನು ಮತ್ತು ನೋಟ್ ಪುಸ್ತಕವನ್ನು ಪಡೆದಿಲ್ಲ, ಅಮಾನತ್ತು ಪಂಚನಾಮೆ ಮಾಡಿಲ್ಲ ಮತ್ತು ಎಫ್ ಎಸ್ ಎಲ್ ಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಕೂಡಾ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.
ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು